ಏಳುವುದಿಲ್ಲ. ಯಾರು ಮಾತಾಡಿಸಿದರೂ ಉತ್ತರ ಕೊಡಬೇಕೆನಿಸುವುದಿಲ್ಲ ಅವಳಿಗೆ. ಮೊಣಕಾಲಿಗೆ ತಲೆಯನ್ನು ಪೋಣಿಸುತ್ತ ಉಂಡೆಯಾಗಿ ಮಲಗಿರುತ್ತಾಳೆ. ಅವಳನ್ನು ಎಬ್ಬಿಸಿ ಹೊರಗೆ ಕರೆದೊಯ್ಯುವ ಧೈರ್ಯವಂತೂ ಯಾರಿಗೂ ಆಗ ಇರುವುದಿಲ್ಲ. ದಿನವಿಡೀ ಹಾಗೇ... ಮುಸುಕಿನಲ್ಲಿ ಬಿಟ್ಟ ಗಾಳಿಯನ್ನೇ ಸೇವಿಸುತ್ತ, ತಲೆಯನ್ನು ಕುಲುಮೆ ಮಾಡಿ, ಮೈ ಹಬೆಗೂಡಾಗುವಂತೆ ಕಾಯಿಸುತ್ತಾಳೆ. ಅವಳ ದ್ವಂದ್ವ ಪರಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ ತಾಯಿ, ತಂಗಿಯರಿಗೆ ಅವಳು ಒಗಟಿನ ಹುತ್ತ.

ಅಂದು- ಬಿರುಸಾಗಿ ನಡೆಯುತ್ತಿದ್ದವಳು, ಥಟ್ಟನೆ ನಿಂತಳು. ತನ್ನ ಆತುರಕ್ಕೆ ಕಾರಣವಿಲ್ಲವೆಂದು ನೆನೆದು, ವೇಗ ಕಡಿಮೆ ಮಾಡಿದಳು. ಮೊಣಕಾಲಿನ ಹಿಂಭಾಗದಲ್ಲಿ ನರಗಳ ನೋವು ಮೇಲೆದ್ದಿತು. ಅದನ್ನು ಗಮನಿಸಿದಂತೆ ಮೆಲ್ಲಗೆ ಮುಂದೆಸಾಗಿದಳು. ಅಕಸ್ಮಾತ್, ಅವನು ಮನೆಗೆ ಬೀಗ ಹಾಕಿಕೊಂಡು ಎಲ್ಲಾದರೂ ಹೊರಗೆ ಹೋದರೆ ಬೀಗದ ಮುಂದೆ ನಿಂತುಕೊಂಡು ಜಪ ಮಾಡುವ ದರ್ದಿರಲಿಲ್ಲ. ಅವಳ ಬಳಿಯೂ ಮನೆಯ ಒಂದು ಡೂಪ್ಲಿಕೇಟ್ ಕೀ ಇದೆ.

ರಾತ್ರಿ- ತಾಯಿಯ ಮನೆಯಲ್ಲಿ ಉಂಡೇ ಹೋದರಾದೀತು ಎಂದೆಣಿಸಿ ನಿಧಾನವಾಗಿದ್ದವಳನ್ನು ತಾಯಿ ಒತ್ತಾಯದಿಂದ- 'ಯಾಕೆ ಹೀಗೆ ಮಕ್ಕಳ ಥರ ಹಠ ಮಾಡ್ತೀಯೋಮ್ಮ ನಾ ಕಾಣೆ...ಮನೆಗೆ ಹೊರಡು, ನಿನ್ನ ಗಂಡನಿಗೆ ಅಡುಗೆ ಮಾಡಬೇಡವೇ... ಹೋಗು' ಎಂದು ಕತ್ತಲಾಗುವುದರಲ್ಲಿ ಅವಳನ್ನು ಅವಳ ಮನೆಗೆ ಅಟ್ಟಿಬಿಡುತ್ತಾರೆ. ದೂರದಲ್ಲಿ ಬಸ್ಸಿನ ಮೂತಿ ಕಾಣಿಸಿತು. ಹೆಜ್ಜೆಯನ್ನು ದೊಡ್ಡದು ಮಾಡಿದಳು. ಬಸ್ಸಿಗೂ ಅವಳಿಗೂ ಇನ್ನೇನು ಸ್ವಲ್ಪ ದೂರದ ಅಂತರವೇ ಇರೋದು ಅನ್ನುವುದರಲ್ಲಿ ಎರಡರ ನಡುವೆ ದೊಡ್ಡ ಮಣ್ಣಿನ ಗುಡ್ಡ. ದೂರದಲ್ಲಿ ಮೂತಿ ತೋರಿಸಿದ ಬಸ್ಸು ಬಾಲ ಮುದುರಿಕೊಂಡು ಹಿಂತಿರುಗುವ ನಾಯಿಯಂತೆ ಸರಕ್ಕನೆ ಮೂತಿಯನ್ನು ಪಕ್ಕಕ್ಕೆ ತಿರುಗಿಸಿಕೊಂಡು ಹೊರಟೇ ಹೋಗೋಣವೇ!

ಬಸ್ಸಿಗಾಗಿ ದಿಣ್ಣೆಯ ಸೊಂಟದವರೆಗೂ ಏರಿದವಳು ಮುಂದೆ ಅಡ್ಡಕ್ಕಿಟ್ಟಿದ್ದ ಪುಟ್ಟ ಗುಹೆಯಂತಿದ್ದ ಪೈಪ್‌ಗಳನ್ನು ಕಂಡು ವಾಪಸ್ ಹಿಂದೆ ಬಂದಳು.

ಪಕ್ಕದ ರಸ್ತೆಯಲ್ಲೂ ರೋಡ್ ರಿಪೇರಿಗಾಗಿ ಉದ್ದಕ್ಕೆ ಅಗೆದಿದ್ದರು. ಸ್ವಲ್ಪ ಹಳ್ಳ-ದಿಣ್ಣೆಯಾಗಿದ್ದ ಅಲ್ಲಲ್ಲಿ ಕಜ್ಜಿ ಬಂದಂತೆ ಜಲ್ಲಿ ಕಿತ್ತು ಹೋಗಿದ್ದ ರಸ್ತೆಗಳನ್ನು ಮತ್ತು ಕಿರಿದಾಗಿದ್ದ, ಡಾಂಬರು ತೆಳುವಾಗಿದ್ದ ಜಾಗಗಳನ್ನೆಲ್ಲ ಅಗೆದು, ಅಗೆದು ಹಾಕಿದ್ದಾರೆ...ಹೂಂ ಬರೀ ಅಗೆಯುವುದೇ ಕೆಲವರ ಕೆಲಸ ಎಂದು ತನ್ನಲ್ಲೇ ಗುನುಗಿಕೊಂಡಳು.

ಬಸ್ಸು ತಪ್ಪಿದ್ದಕ್ಕೆ, ಮತ್ತೆ ತಾನು ಬಳಸಿಕೊಂಡು ನಡೆಯಬೇಕಾದ್ದಕ್ಕೆ ಮನದೊಳಗೇ ಮಣಮಣ ಗುಟ್ಟಿಕೊಂಡು ಹೆಜ್ಜೆಯನ್ನು ಎಳೆದಳು. ಈ ಹಾಳು ಸರ್ಕಾರಕ್ಕೆ ಮಾಡಲು ಬೇರೆ ಕೆಲಸವೇ ಇಲ್ಲವೇನೋ? ಕೆಟ್ಟು ಹೋದ ರಸ್ತೆಗಳನ್ನೇನೋ ಕೆತ್ತಿ -ಕೆದಕಿ ರಿಪೇರಿ ಮಾಡೋದೇನೋಸರಿ.ಆದರೆಸುಮಾರಾಗಿವೈನಾಗಿದ್ದ, ರಸ್ತೆಗಳನ್ನೂ ಬಗೆದು ಹಾಕಿದ್ದಾರಲ್ಲ... ದರಿದ್ರದವರು. ಅಗೆದಷ್ಟೇ ಬೇಗ ತುಂಬಿಸಿ ರಿಪೇರಿ ಮಾಡೋ ಬುದ್ಧಿಯೆಲ್ಲಿ. ತಿಂಗಳಾನುಗಟ್ಟಲೆ ಎದೆ ಕೆರೆಸಿಕೊಂಡ ರಸ್ತೆಗಳು ಬೆತ್ತಲೆ ಹೀಗೆ ಬಿದ್ದಿರ್ತವೆ. ಮತ್ತೆ ಬೇರೆ ಬೇರೆ ರಸ್ತೆಗಳ ಬೇಟೆ. ಮತ್ತೆ ಅಗೆದು-ಬಗೆದು ಅರ್ಧಕ್ಕೇ ಬಿಟ್ಟು ಹೊಸದರತ್ತ ದೌಡು...ಒಟ್ಟಿಗೆ ಹತ್ತು ಕೆಲಸಕ್ಕೆ ಕೈ ಹಾಕಿ ಒಂದೂ ನೆಟ್ಟಗೆ ಪೂರೈಸದ ತ್ಯಾಪೆ ಹಚ್ಚೋ ಕೇಮು...ಅದೇಕೋ. ಕೋಪ ಅವಡುಗಚ್ಚಿತು.ಈ ಕಡೆ ಇವರು, ಆ ಕಡೆಯಿಂದ ಅವರು.ನೀರಿನವರು, ವಿದ್ಯುಚ್ಛಕ್ತಿಯವರು, ಟೆಲಿಫೋನ್ ನವರು ಹೂಂ.. ಇನ್ನು ಯಾರ್ಯಾರೋ ಸಂಬಂಧಪಟ್ಟವರು, ಪಡದವರು ಎಲ್ಲರೂ ಸೇರಿಕೊಂಡು ಒಂದೊಂದು ಗುದ್ದಲಿ ಪೆಟ್ಟು ಕೊಡೋದೇ....ಉದ್ದಕ್ಕೂ ಗಾಯಗಳು..!

ಫುಟ್‌ಪಾತಿನ ಅಂಚಿಗೆ ಬಂದು, ಸೀರೆಗೆ ಟಾರು, ಮಣ್ಣು ಮೆತ್ತೀತೆಂದು ಸೀರೆಯ ಅಂಚನ್ನು ಮೇಲಕ್ಕೆ ಎತ್ತಿ ಹಿಡಿಯುತ್ತ, ಪಕ್ಕದ ಚರಂಡಿಗೆ ಜಾರದಂತೆ ಎಚ್ಚರಿಕೆ ವಹಿಸುತ್ತ ಅವಳು ತುದಿಗಾಲಲ್ಲಿ ನಡೆಯತೊಡಗಿದಳು. ಆದರೂ ತಲೆ ಟಾರಿನ ಡ್ರಮ್ಮಿನೊಳಗೆ ಅದ್ದಿದಂಥಾ ಭಾವ...ಪಕ್ಕದಲ್ಲಿ ಜಲ್ಲಿ ರಾಶಿಗಳು, ಸೊಟ್ಟಗೆ ಹರಿದ ಕೊರಕಲನ್ನು ಕಂಡಾಗ ಅನಿಸುತ್ತದೆ, ಟಾರಿನಲ್ಲಿ ಕಲಿಸಿದ ಜಲ್ಲಿಯನ್ನು ಹಾಕಿ ಯಾವಾಗ ಇದನ್ನು ದಂಬಸ್ ಮಾಡುವರೋ?..ಹೂಂ.. ಸಮ ಮಾಡುತ್ತೇವೆ ಎಂಬ ಭ್ರಮೆ ಅವರಿಗೆ ಎಂದು ನೆನೆಸಿಕೊಂಡು ಹುಸಿನಗುವಿನೊಂದಿಗೆ ನಿಟ್ಟುಸಿರು ಚಿಮ್ಮಿತು...ಅಷ್ಟೇನೂ ಅವಲಕ್ಷಣವಾಗಿರದ ನೆಲದ ಒಡಲೆಲ್ಲ ಕೆರೆಕೆರೆದು...